## ನದಿಯ ನೆನಪು

‘ಈ ರೀತಿಯ ನದಿಯ ಹರಿವನ್ನು ನಾವು 40 ವರ್ಷಗಳ ಹಿಂದೆ ನೋಡಿದ್ದೆವು. ನಂದಿ ಬೆಟ್ಟದಲ್ಲಿ ಹೆಚ್ಚು ಮಳೆಯಾದಾಗ ನದಿಯ ಅಬ್ಬರ ಹೆಚ್ಚುತ್ತಿತ್ತು. ಆಗ ಕುರಿಗಾಹಿಗಳು, ನದಿ ದಡದಲ್ಲಿ ಇದ್ದವರು ತೊಂದರೆ ಎದುರಿಸುತ್ತಿದ್ದರು. ಆ ಸಂಭ್ರಮವೆಲ್ಲ ದಶಕಗಳ ಕಾಲ ಕಾಣೆಯಾಗಿತ್ತು. ಈಗ ಮತ್ತೆ ವೈಭವದಿಂದ ಹರಿಯುತ್ತಿದೆ’ ಎಂದು ನದಿಯ ಆಳಅಗಲದ ಮಾಹಿತಿ ನೀಡುತ್ತಾರೆ ಪರಿಸರವಾದಿ ಗೌರಿಬಿದನೂರಿನ ಚೌಡಪ್ಪ.

ಕರ್ನಾಟಕಕ್ಕಿಂತ ಆಂಧ್ರಪ್ರದೇಶದಲ್ಲಿ ಈ ನದಿ ಹೆಚ್ಚು ಹರಿಯುತ್ತದೆ. ರಾಯಲಸೀಮೆಯಲ್ಲಿ ಉತ್ತರ ಪಿನಾಕಿನಿಯ ಜತೆ ಕುಮುದ್ವತಿ, ಜಯಮಂಗಲಿ, ಕುಂದೇರು, ಸಗಲೇರು ನದಿಗಳು ಸಹ ಸೇರುತ್ತವೆ. ಆಂಧ್ರಪ್ರದೇಶದ ಜನರು ಈ ನದಿಯ ಮೇಲೆ ಹೆಚ್ಚು ಅವಲಂಬಿತರಾಗಿದ್ದಾರೆ ಎನ್ನುವುದು ಚೌಡಪ್ಪನವರ ಅನಿಸಿಕೆ.

ಮರಳು ಗಣಿಗಾರಿಕೆ, ತ್ಯಾಜ್ಯದ ತಿಪ್ಪೆಯನ್ನಾಗಿಸಿದ್ದು ಸೇರಿದಂತೆ ನದಿಯ ಮೇಲೆ ಮನುಷ್ಯನ ಹಸ್ತಕ್ಷೇಪ ಅವ್ಯಾಹತವಾಗಿ ನಡೆದಿದೆ. ಬೆಂಗಳೂರಿಗೆ ಗೌರಿಬಿದನೂರು ಹತ್ತಿರವಿರುವ ಕಾರಣ ಮರಳು–ಮಣ್ಣಿಗಾಗಿ ನದಿಯ ಒಡಲನ್ನು ಬರಿದು ಮಾಡಲಾಯಿತು. ಕಟ್ಟಡಗಳು ತಲೆ ಎತ್ತಿದವು. ನದಿ ಪಾತ್ರ ಒತ್ತುವರಿಗೆ ನಲುಗಿತು. ಹೀಗೆ ಅವ್ಯಾಹತವಾಗಿ ಉತ್ತರ ಪಿನಾಕಿನಿಯ ಮೇಲೆ ಆಕ್ರಮಣಗಳು ಜರುಗಿದವು. ಆದರೆ ನಾವು ನದಿ ಜಾಗವನ್ನು ಎಷ್ಟೇ ಆಕ್ರಮಿಸಿಕೊಂಡು ಅದರ ಚಹರೆಯನ್ನು ಬದಲಿಸಿದರೂ, ಅದಕ್ಕೆ ತನ್ನ ಜಾಗ ಯಾವುದು ಎನ್ನುವುದು ತಿಳಿದೇ ಇರುತ್ತದೆ ಎನ್ನುವುದಕ್ಕೆ ಪ್ರಸ್ತುತ ಉತ್ತರ ಪಿನಾಕಿನಿ ಮೈದುಂಬಿ ಹರಿದಿರುವುದೇ ಸಾಕ್ಷಿ.



ದೊಡ್ಡಕುರುಗೋಡು ದಾಟಿ ಚೌಳೂರು ಮೂಲಕ ಆಂಧ್ರಪ್ರದೇಶ ಪ್ರವೇಶಿಸುತ್ತದೆ. ಹಿಂದೂಪುರ, ಪೆನುಗೊಂಡ ತಾಲ್ಲೂಕಿನಲ್ಲಿ ಹರಿದು ಮತ್ತೆ ಕರ್ನಾಟಕದ ಪಾವಗಡ ತಾಲ್ಲೂಕಿನ ನಾಗಲಮಡಿಕೆಗೆ ಉತ್ತರ ಪಿನಾಕಿನಿ ತಲುಪುತ್ತದೆ. ತುಮಕೂರು ಜಿಲ್ಲೆಯ ದೇವರಾಯನದುರ್ಗದಲ್ಲಿ ಹುಟ್ಟುವ ಜಯಮಂಗಲಿ ನದಿ ಹಿಂದೂಪುರದ ಬಳಿ ಪೆನ್ನಾರ್ (ಉತ್ತರ ಪಿನಾಕಿನಿ) ನದಿಯೊಟ್ಟಿಗೆ ಸಂಗಮವಾಗುತ್ತದೆ. ಪಾವಗಡದಿಂದ ಆಂಧ್ರದ ಪೆರೂರು ಅಣೆಕಟ್ಟು ಸೇರುತ್ತದೆ. ಪೆನ್ನಾ ಅಹೂಬಲೇಂ, ಪೆನಕಚರ್ಲ, ಗಡಿಕೋಟ, ಮೈಲಾವರಂ, ಸೋಮಶಿಲಾ ಅಣೆಕಟ್ಟೆಗಳನ್ನು ಹಾದು ಬಂಗಾಳಕೊಲ್ಲಿಯಲ್ಲಿ ಉತ್ತರ ಪಿನಾಕಿನಿ ಲೀನವಾಗುತ್ತದೆ.

### ಹರಿವು ಬಂದ್; ಸಕ್ಕರೆಯೂ ಸ್ಥಗಿತ

ಗೌರಿಬಿದನೂರು ಒಂದು ಕಾಲದಲ್ಲಿ ‘ಸಕ್ಕರೆಯ ಬೀಡು’ ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿತ್ತು. ಅದಕ್ಕೆ ಕಾರಣ ಉತ್ತರ ಪಿನಾಕಿನಿಯೇ! ನದಿ ಸಮೃದ್ಧವಾಗಿ ಹರಿಯುತ್ತಿದ್ದ ದಿನಗಳಲ್ಲಿ ಗೌರಿಬಿದನೂರು ಹಾಗೂ ಅದಕ್ಕೆ ಹೊಂದಿಕೊಂಡ ಇತರ ತಾಲ್ಲೂಕುಗಳಲ್ಲಿಯೂ ಕಬ್ಬನ್ನು ಹೇರಳವಾಗಿ ಬೆಳೆಯಲಾಗುತ್ತಿತ್ತು. ನದಿ ಅಂಚಿನಲ್ಲಿಯೇ ಸಿರುಗುಪ್ಪ ಸಕ್ಕರೆ ಕಾರ್ಖಾನೆ ಇತ್ತು. ಉತ್ತರ ಪಿನಾಕಿನಿಯ ಹರಿವು ಹಂತ ಹಂತವಾಗಿ ಕ್ಷೀಣಿಸಿದಂತೆ ಸಕ್ಕರೆ ಕಾರ್ಖಾನೆಯೂ ಬಾಗಿಲು ಮುಚ್ಚಿತು.

### ತತ್ತರಿಸಿದ ಜನರು

ಉತ್ತರ ಪಿನಾಕಿನಿ ನದಿ ಬತ್ತಿದ ನಂತರ ಅದರ ಮೇಲೆ ಅವ್ಯಾಹತವಾಗಿ ದಾಳಿ ನಡೆಯಿತು. ಮರಳು ಗಣಿಗಾರಿಕೆ ಎಗ್ಗಿಲ್ಲದೆ ನಡೆಯಿತು. ನದಿಯಲ್ಲಿಯೇ ಇಟ್ಟಿಗೆ ಕಾರ್ಖಾನೆಗಳು ತಲೆ ಎತ್ತಿದವು. ಅಷ್ಟೇಕೆ, ಸರ್ಕಾರದ ಅನುದಾನದಲ್ಲಿ ಸರ್ಕಾರಿ ಶಾಲೆ, ಅಂಗನವಾಡಿ, ಸಮುದಾಯದ ಶೌಚಾಲಯ, ಮಟನ್ ಮಾರ್ಕೆಟ್, ಉದ್ಯಾನ, ಮಕ್ಕಳ ಆಟೋಪಕರಣಗಳ ಅಳವಡಿಕೆ ಸೇರಿದಂತೆ ಅಭಿವೃದ್ಧಿ ಹೆಸರಿನಲ್ಲಿ ನದಿಪಾತ್ರ ಒತ್ತುವರಿ ಆಗಿದೆ. ಇದೀಗ ಪಿನಾಕಿನಿ ನದಿಯಲ್ಲಿ ಹರಿಯುತ್ತಿರುವ ನೀರಿನ ಪರಿಣಾಮವಾಗಿ ಎಲ್ಲವೂ ಅತಂತ್ರ ಪರಿಸ್ಥಿತಿಯಲ್ಲಿವೆ. ಪ್ರಸ್ತುತ ನದಿ ಪಾತ್ರದಲ್ಲಿ 1200ಕ್ಕೂ ಹೆಚ್ಚು ಮನೆಗಳು ನಿರ್ಮಾಣವಾಗಿವೆ. ನದಿ ಉಕ್ಕಿ ಹರಿದಾಗ ಅದರ ಫಾಸಲೆಯಲ್ಲಿರುವ ಜನ ತಾವನ್ನು ಬಿಟ್ಟು ಬೇರೆಡೆ ಹೋಗಲೇಬೇಕು.

ಉತ್ತರ ಪಿನಾಕಿನಿ ಭೂತಕಾಲಕ್ಕೆ ಸೇರುತ್ತಿದೆ ಎನ್ನುವ ಹೊತ್ತಿನಲ್ಲಿ ಮತ್ತೆ ತನ್ನ ಅಸ್ತಿತ್ವ ಪ್ರಕಟಪಡಿಸಿದೆ. ‘ನನ್ನ ಜಾಗ ನಾನು ಬಿಟ್ಟು ಕೊಡೆನು’ ಎನ್ನುವಂತೆ ನದಿ ದಡ, ಒಡಲಿನಲ್ಲಿ ಮನುಷ್ಯ ನಡೆಸಿದ್ದ ಅಕ್ರಮಗಳ ತೊಯ್ದಿಸಿಕೊಂಡು ಹರಿಯುತ್ತಿದ್ದಾಳೆ. ಉತ್ತರ ಪಿನಾಕಿನಿಯ ವೈಭವದ ಇತಿಹಾಸ, ಮನುಷ್ಯನ ಹಸ್ತಕ್ಷೇಪ, ನದಿ ಮತ್ತೆ ಭೋರ್ಗರೆದ ಸಂಭ್ರಮ – ಇವೆಲ್ಲವೂ ನದಿಗಳ ಅಧ್ಯಯನಕ್ಕೆ ಒಂದು ದೊಡ್ಡ ಆಕರವೇ ಆಗುತ್ತದೆ.

ಪ್ರತಿಕ್ರಿಯಿಸಿ: feedback@sudha.co.in